**2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .**

SC. No.165-2022

ದೋ.ಸಾ. 23
ಪ್ರಾ.ಸಾ. 16
ಪ್ರ.ವ.ಬೊ.ದಿನಾಂಕ. 18-02-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ವೀರೇಶ |
| ತಂದೆ / ಗಂಡನ ಹೆಸರು | - | ರುದ್ರಯ್ಯ |
| ವಯಸ್ಸು | - | 40 |
| ಉದ್ಯೋಗ | - | ಆರಕ್ಷಕ ನಿರೀಕ್ಷಕರು, ವಿವೇಕ ನಗರ ಪೊಲೀಸ್ ಠಾಣೆ, ಬೆಂಗಳೂರು |
| ವಾಸ ಸ್ಥಳ | - | ಬೆಂಗಳೂರು |

ಸಾಕ್ಷಿಯ ವಿಚಾರಣೆಯನ್ನು ವಿಸಿ ಮೂಲಕ ತೆಗೆದುಕೊಳ್ಳಲಾಯಿತು.
ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ದಿಃ 25-11-2019 ರಿಂದ 01-06-2021 ರವರೆಗೆ ನಾನು ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ಪಿಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಈ ಪ್ರಕರಣದಲ್ಲಿ ದಿಃ 16-10-2020 ರಂದು ಸಂಜೆ 6-00 ಗಂಟೆಗೆ ನಾನು ಠಾಣೆಯಲ್ಲಿ ಇರುವಾಗ ಪ್ರಾ.ಸಾ.14 ರವರು ಠಾಣೆಗೆ ಆಗಮಿಸಿ ನೀಡಿದ ಲಿಖಿತ ದೂರನ್ನು ಸ್ವೀಕರಿಸಿ ಠಾಣಾ ಗುನ್ನ ನಂ.160/2020 ರಂತೆ ಪ್ರಕರಣವನ್ನು ದಾಖಲಿಸಿಕೊಂಡು ಪ್ರ.ವ.ವರದಿಯನ್ನು ತಯಾರಿಸಿ ನ್ಯಾಯಾಲಯಕ್ಕೂ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ. ದೂರು ಈಗಾಗಲೆ ನಿ.ಪಿ.1 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.1(ಸಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿ.ಪಿ.33 ಎಂದು ಹಾಗೂ ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿ.ಪಿ.33(ಎ) ಎಂದು ಗುರುತಿಸಲಾಯಿತು.

ನಂತರ ಅದೇ ದಿನ ಆರೋಪಿತರ ಪತ್ತೆಗಾಗಿ ಠಾಣಾ ಸಿಬ್ಬಂದಿ ಹೆಚ್ ಸಿ 366, ಪಿಸಿ 120, 479 ರವರನ್ನು ನೇಮಿಸಿರುತ್ತೇನೆ. ಆ ದಿನ ರಾತ್ರಿಯಾದ ಕಾರಣ ಘಟನಾ ಸ್ಥಳಕ್ಕೆ ಹೋಗಿ ಪಂಚನಾಮೆ ಬರೆಯಲು ಸಾಧ್ಯವಾಗಿರುವುದಿಲ್ಲ. ತದನಂತರ ನಾನು ಈ ಪ್ರಕರಣದ ಸಾಕ್ಷಿದಾರರಾದ ಪ್ರಾ.ಸಾ.11 ಮತ್ತು 15 ರವರ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ. ಪ್ರಾ.ಸಾ.15 ರವರು ನಿ.ಪಿ.32 ರಂತೆ ನನ್ನ ಸಮಕ್ಷಮ ಹೇಳಿಕೆ ನೀಡಿರುತ್ತಾರೆ. ನಂತರ ಅದೇ ದಿನ ನಮ್ಮ ಸಿಬ್ಬಂದಿಯವರು ರಾತ್ರಿ 9-20 ಗಂಟೆಗೆ ಆರೋಪಿತರನ್ನು ಬೆಂಕಿಕೆರೆಯ ಲೋಕಿಕೆರೆ ರಸ್ತೆಯ ಬಳಿ ವಶಕ್ಕೆ ಪಡೆದು ರಾತ್ರಿ 9-50 ಗಂಟೆಗೆ ನನ್ನ ಸಮಕ್ಷಮ ಹಾಜರುಪಡಿಸಿರುತ್ತಾರೆ. ನಂತರ ಸದರಿ ಇಬ್ಬರು ಆರೋಪಿತರನ್ನು ವಿಚಾರಿಸಿ ಅವರನ್ನು ವಶಕ್ಕೆ ಪಡೆದುಕೊಂಡು ಅವರ ಸ್ವ ಖುಷಿ ಹೇಳಿಕೆಗಳನ್ನು ದಾಖಲಿಸಿಕೊಂಡಿರುತ್ತೇನೆ.

(ಈ ಹಂತದಲ್ಲಿ ಸಾಕ್ಷಿಯು ತನ್ನ ಬಳಿ ಸಂಪೂರ್ಣ ಕಡತಗಳು ಇಲ್ಲ ಎಂದು ನುಡಿದಿದ್ದು, ಆ ಕಾರಣ ಸಂಪೂರ್ಣ ಕಡತವನ್ನು ಪಡೆದುಕೊಂಡು ಸಾಕ್ಷಿ ನುಡಿಯುವಂತೆ ಸೂಚಿಸಿ ಸಾಕ್ಷಿ ವಿಚಾರಣೆಯನ್ನು ಮುಂದೂಡಲಾಗಿರುತ್ತದೆ.)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ ಹಾಗೂ ವಿಶೇಷ ನ್ಯಾಯಾಲಯ ದಾವಣಗೆರೆ .

SC. No.165-2022

ದೋ.ಸಾ. 11
ಫ್ರಾ.ಸಾ. 15
ಪ್ರ.ವ.ಬೊ.ದಿನಾಂಕ. 18-02-2026

| | | |
|---|---|---|
| ಹೆಸರು ಶ್ರೀ/ ಶ್ರೀ ಮತಿ. | - | ನಾಗೇಶ್ ರಾವ್ |
| ತಂದೆ / ಗಂಡನ ಹೆಸರು | - | ಹನುಮಂತಪ್ಪ |
| ವಯಸ್ಸು | - | 65 |
| ಉದ್ಯೋಗ | - | ಆಟೋ ಚಾಲಕ |
| ವಾಸ ಸ್ಥಳ | - | ದಾವಣಗೆರೆ |

ಮುಖ್ಯವಿಚಾರಣೆಃ - ಮಾನ್ಯ ಸರ್ಕಾರಿ ಅಭಿಯೋಜಕರಿಂದ

ನಾನು ಈ ಮೊದಲು ತ್ರಿಶೂಲ್ ಭವನದ ಬಳಿ ಹೋಂ ಗಾರ್ಡ್ ಕೆಲಸ ಮಾಡುತ್ತಿದ್ದೆ. ಆ ಸಮಯದಲ್ಲಿ ಕರೋನಾ ಪಿಡುಗು ಇತ್ತು. ಸದರಿ ಕೆಲಸವು ಬೆಳಿಗ್ಗೆ 8-00 ಗಂಟೆಯಿಂದ ಸಂಜೆ 6-00 ಗಂಟೆಯವರೆಗೆ ಇರುತ್ತಿತ್ತು. ನನಗೆ ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯ ಇರುತ್ತದೆ. ಸದರಿ ಒಂದು ದಿನ ಮಧ್ಯಾಹ್ನ 3-00 ಗಂಟೆ ಸಮಯದಲ್ಲಿ ತ್ರಿಶೂಲ್ ಭವನದ ಎದುರುಗಡೆ ಮೂವರು ಜನರು ಗಲಾಟೆ ಮಾಡಿಕೊಳ್ಳುತ್ತಿದ್ದು, ಆ ಸಮಯದಲ್ಲಿ ಅಲ್ಲಿಗೆ ಒಂದು ಆಟೋ ಬಂದಿದ್ದು, ಅದರಲ್ಲಿ ಆ ರೀತಿ ಗುದ್ದಾಡಿಕೊಳ್ಳುತ್ತಿರುವವರು ಹೋಗಿರುತ್ತಾರೆ. ಆ ರೀತಿ ಗುದ್ದಾಡಿಕೊಂಡವರಲ್ಲಿ ಯಾರಿಗೆ ಏನು ಆಗಿತ್ತು ಎಂದು ನನಗೆ ತಿಳಿದಿರುವುದಿಲ್ಲ. ಯಾವ ವಿಚಾರಕ್ಕೆ ಸಂಬಂಧಿಸಿ ಗುದ್ದಾಡಿಕೊಂಡಿರುತ್ತಾರೆ ಎಂದು ನನಗೆ ತಿಳಿದಿರುವುದಿಲ್ಲ. ಪೋಲೀಸರು ಈ ಕುರಿತಾಗಿ ನನ್ನನ್ನು ವಿಚಾರಿಸಿರುವುದಿಲ್ಲ, ನಾನು ಯಾವುದೇ ಹೇಳಿಕೆ ನೀಡಿರುವುದಿಲ್ಲ. ಸಾಕ್ಷಿಗೆ ನಿ.ಪಿ.19 ಮತ್ತು 20 ನ್ನು ತೋರಿಸಲಾಗಿದ್ದು, ಸಾಕ್ಷಿಯು ಅದನ್ನು ನೋಡಿ ಅದೇ ಸ್ಥಳದಲ್ಲಿ ಗುದ್ದಾಡಿಕೊಂಡಿದ್ದರು ಎಂದು ನುಡಿದಿರುತ್ತಾರೆ.

( ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

ಪಾಟೀಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಸದರಿ ತ್ರಿಶೂಲ್ ಭವನಕ್ಕೆ ನಾನು ಸೆಕ್ಯೂರಿಟಿ ಗಾರ್ಡ್ ಆಗಿ ಕೆಲಸ ಮಾಡುತ್ತಿದ್ದೆ ಎಂದರೆ ಸರಿ. ಆ ದಿನ ದಿಃ 16-10-2020 ರಂದು ಮಧ್ಯಾಹ್ನ 2-00 ಗಂಟೆ ಸಮಯದಲ್ಲಿ ನಾನು ಸದರಿ ಭವನದ ಗೇಟ್ ಬಳಿ ಕೆಲಸ ಮಾಡುತ್ತಿರುವಾಗ ಆರೋಪಿತರು ಓರ್ವ ವ್ಯಕ್ತಿಯು ಬೈಕಿನಲ್ಲಿ ಬರುವವನನ್ನು ಅಡ್ಡಗಟ್ಟಿ ಹಿಡಿದಿರುತ್ತಾರೆ ಎಂದರೆ ಸಾಕ್ಷಿಯು ಅವರು ಕೆಳಗಡೆ ಬಿದ್ದಾಗ ನಾನು ನೋಡಿದ್ದೇನೆ ಎಂದು ನುಡಿದಿರುತ್ತಾರೆ. ಆ ಸಮಯದಲ್ಲಿ ಆರೋಪಿತರಲ್ಲಿ ಒಬ್ಬನು ಸದರಿ ಬೈಕ್ ಸವಾರನಿಗೆ ಜಯಶ್ರೀಯ ಸುದ್ದಿಗೆ ಬಂದರೆ ನೋಡು ಎಂದು ಹೇಳಿದ್ದಲ್ಲದೇ,

ಅಲ್ಲದೇ ನಿನ್ನನ್ನು ಸಾಯಿಸದೇ ಬಿಟ್ಟರೆ ತಾನೇ ನೀನು ಜಯಶ್ರೀಯನ್ನು ಮದುವೆಯಾಗುವುದು ಎಂದು ಹೇಳುತ್ತ ಚಾಕುವಿನಿಂದ ಆತನಿಗೆ ಚುಚ್ಚಿರುತ್ತಾರೆ ಎಂದರೆ ನಾನು ನೋಡಿರುವುದಿಲ್ಲ. ಆ ಸಮಯದಲ್ಲಿ ಆರೋಪಿತರಲ್ಲಿ ಓರ್ವನು ಸದರಿ ವ್ಯಕ್ತಿಯನ್ನು ಹಿಡಿದುಕೊಂಡಿದ್ದು, ಇನ್ನೋರ್ವನು ಚಾಕುವಿನಿಂದ ಚುಚ್ಚಿರುತ್ತಾನೆ ಎಂದರೆ ನಾನು ನೋಡಿರುವುದಿಲ್ಲ. ನಾನು ಹತ್ತಿರಕ್ಕೆ ಹೋಗುವಷ್ಟರಲ್ಲಿ ನಿನ್ನನ್ನು ನೋಡಿಕೊಳ್ಳುತ್ತೇವೆ ಎಂದು ಸದರಿ ವ್ಯಕ್ತಿಗೆ ಹೇಳಿ ಆರೋಪಿತರು ಅಲ್ಲಿಂದ ಚಾಕು ಸಮೇತ ಓಡಿಹೋಗಿರುತ್ತಾರೆ ಎಂದರೆ ನನಗೆ ತಿಳಿದಿರುವುದಿಲ್ಲ. ಆ ರೀತಿ ಚಾಕುವಿನಿಂದ ಗಾಯ ಆದ ವ್ಯಕ್ತಿಯು ಅಲ್ಲಿ ಕೆಳಗಡೆ ಬಿದ್ದಿದ್ದು, ಆಗ ನೆರೆದ ಜನರು ಆತನ ಹೆಸರನ್ನು ಕೇಳಿರುತ್ತಾರೆ ಎಂದರೆ ಸರಿ. ಆಗ ಆತ ತನ್ನ ಹೆಸರು ಮೊಹಮ್ಮದ್ ಇಸ್ಮಾಯಿಲ್ ಜಬೀವುಲ್ಲಾ ಎಂದು ಹೇಳಿರುತ್ತಾನೆ ಎಂದರೆ ಸರಿ.

ಆ ಸಮಯದಲ್ಲಿ ಸದರಿ ಗಾಯಾಳು ನಮ್ಮ ಬಳಿ ತಾನು 1 ನೇ ಆರೋಪಿಯ ಸೊಸೆ ಜಯಶ್ರೀಯನ್ನು ಪ್ರೀತಿಸುತ್ತಿದ್ದು, ಅದೇ ಕಾರಣಕ್ಕೆ ಅವರಿಬ್ಬರು ಸೇರಿಕೊಂಡು ತಾನು ಜಯಶ್ರೀಯನ್ನು ಪ್ರೀತಿಸುವುದನ್ನು ಮುಂದುವರೆಸುವುದು ಬೇಡ ಎಂದು ಹೇಳಿ ಅಡ್ಡಗಟ್ಟಿ ಚಾಕುವಿನಿಂದ ಚುಚ್ಚಿ ಕೊಲೆ ಮಾಡಲು ಪ್ರಯತ್ನಿಸಿದ್ದಾರೆ ಎಂದು ಹೇಳಿರುತ್ತಾನೆ ಎಂದರೆ ನನಗೆ ತಿಳಿದಿರುವುದಿಲ್ಲ. ಆ ಸಮಯದಲ್ಲಿ ಆತ ನಮ್ಮ ಬಳಿ ಆರೋಪಿತರಲ್ಲಿ ಒಬ್ಬನ ಹೆಸರು ರಾಜು ಮತ್ತೊಬ್ಬ ಆತನ ಸ್ನೇಹಿತ ಎಂದು ಹೇಳಿರುತ್ತಾನೆ ಎಂದರೆ ಸರಿ. ನಂತರ ಸದರಿ ಗಾಯಾಳುವನ್ನು ಆಸ್ಪತ್ರೆಗೆ ಸಾಗಿಸಿರುತ್ತಾರೆ ಎಂದರೆ ಸರಿ. ತದನಂತರ ಪೋಲೀಸರು ನನ್ನನ್ನು ವಿಚಾರಿಸಿದ್ದು, ಆಗ ನಾನು ಈಗ ಹೇಳಿದ ರೀತಿಯಲ್ಲಿ ನನ್ನ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯ ಭಾಗವನ್ನು ನಿ.ಪಿ.32 ಎಂದು ಗುರುತಿಸಲಾಯಿತು.

ನಂತರ ಮರುದಿನ ಪೋಲೀಸರು ನನ್ನನ್ನು ಠಾಣೆಗೆ ಕರೆಯಿಸಿದ್ದರು ಎಂದರೆ ಸರಿ. ಅಲ್ಲಿ ನಾನು ಠಾಣೆಗೆ ಹೋದಾಗ ಆರೋಪಿತರನ್ನು ತೋರಿಸಿದ್ದು, ಅಲ್ಲಿ ನಾನು ಆರೋಪಿತರನ್ನು ಗುರುತಿಸಿದ್ದೇನೆ ಎಂದರೆ ಸರಿ. ನಾನು ಠಾಣೆಯಲ್ಲಿ 2 ನೇ ಆರೋಪಿಯು ಫ್ರಾ.ಸಾ.1 ರವರ ಕೈಗಳನ್ನು ಹಿಡಿದುಕೊಂಡಿದ್ದು, 1 ನೇ ಆರೋಪಿಯು ಚಾಕುವಿನಿಂದ ಚುಚ್ಚಿದ್ದ ಎಂದು ಹೇಳಿದ್ದೇನೆ ಎಂದರೆ ಸರಿ.

**ಪಾಟೀಸವಾಲುಃ ಆರೋಪಿತರ ಪರ ವಕೀಲರಿಂದ.**

ಸದರಿ ತ್ರಿಶೂಲ್ ಭವನದ ಗೇಟಿನ ಬಳಿ ವಾಚ್ ಮನ್ ಗಳಿಗಾಗಿ ಒಂದು ಕೊಠಡಿಯಿದೆ ಎಂದರೆ ಸರಿ. ಸದರಿ ಗೇಟು ರಸ್ತೆಯಿಂದ ಸುಮಾರು 20 ರಿಂದ 30 ಅಡಿ ದೂರದಲ್ಲಿ ಇದೆ ಎಂದರೆ ಸರಿ. ಗಲಾಟೆಯಾಗಿರುವುದು ತ್ರಿಶೂಲ್ ಟಾಕೀಸಿನ ಎದುರು ಎಂದರೆ ಸರಿ. ನಾನು ಕುಳಿತುಕೊಳ್ಳುವ ಸ್ಥಳದಿಂದ ಗಲಾಟೆಯಾಗುವ ಸ್ಥಳ ನೋಡಬೇಕಾದರೆ ಅಲ್ಲಿಂದ ರಸ್ತೆಗೆ ಬಂದು ನೋಡಬೇಕು ಎಂದರೆ ಸರಿ. ಸಾಕ್ಷಿಯು ಸ್ವತಃ ಮುಂದುವರೆದು ಆ ದಿನ ತಾನು ಟೀ ತರಲು ಹೋಗುತ್ತಿದ್ದೆ ಎಂದು ನುಡಿದಿರುತ್ತಾರೆ. ನಾನು ಆ ದಿನ ಗಲಾಟೆ ನೋಡಿ ಪೋಲೀಸರನ್ನು ಸ್ಥಳಕ್ಕೆ ಕರೆಯಿಸುವ ಪ್ರಯತ್ನ ಮಾಡಿದ್ದು ಇರುವುದಿಲ್ಲ. ಸದರಿ ಗಲಾಟೆಯ ಸ್ಥಳದಲ್ಲಿ ಆ ದಿನ ಯಾರು ಯಾರು ಇದ್ದರು ಎಂದು ನನಗೆ ತಿಳಿದಿರುವುದಿಲ್ಲ. ಸದರಿ ಸ್ಥಳದಲ್ಲಿ ಬಹಳಷ್ಟು ಜನರು ಇದ್ದ ಕಾರಣ ಅವರಲ್ಲಿ ಆರೋಪಿತರು

ಕೂಡ ಇದ್ದರು ಎಂದು ನಿರ್ದಿಷ್ಟವಾಗಿ ನನಗೆ ಹೇಳಲು ಸಾಧ್ಯವಿಲ್ಲ ಎಂದರೆ ಸರಿ. ನಾನು ಗಾಯಾಳುವನ್ನು ಕೂಡ ಕಣ್ಣಾರೆ ನೋಡಿಲ್ಲ ಎಂದರೆ ಸರಿ. ತದನಂತರ ಪೋಲೀಸರು ಠಾಣೆಗೆ ಕರೆಯಿಸಿ ನನ್ನನ್ನು ವಿಚಾರಿಸಿಲ್ಲ ಎಂದರೆ ಸರಿ. ನಾನು ಇದೇ ಪ್ರಥಮ ಬಾರಿ ನ್ಯಾಯಾಲಯದಲ್ಲಿ ಆರೋಪಿತರನ್ನು ನೋಡಿದ್ದು ಬಿಟ್ಟರೆ ಆ ಮೊದಲು ಎಲ್ಲಿಯೂ ನೋಡಿರುವುದಿಲ್ಲ ಎಂದರೆ ಸರಿ.

ಮರುವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ . ಹೇ. ಕೇ. ಸರಿಯಾಗಿದೆ.

2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದಾವಣಗೆರೆ.